ಇ) ಕರ್ನಾಟಕ ಲೋಕಸೇವಾ ಆಯೋಗದಿಂದ ವಿವಿಧ ವೃಂದಗಳಿಗೆ ನೇರನೇಮಕಾತಿ ಪ್ರಕ್ರಿಯೆಯು ಸ್ಥಗಿತಗೊಂಡಿರುವುದರಿಂದ ಹುದ್ದೆಗಳು ಖಾಲಿ ಇರಲು ಕಾರಣವಾಗಿರುತ್ತದೆ. ಖಾಲಿ ಇರುವ ಹುದ್ದೆಗಳಲ್ಲಿ ಮುಂಬಡ್ತಿ ಮೂಲಕ ತುಂಬುವಂತಹ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಕಪ್ಪು ಮಣ್ಣಿನ ಪ್ರದೇಶ

408(170); ಶ್ರೀ ಪುಟ್ಟಣ್ಣಯ್ಯ ಕೆ.ಎಸ್.

ಅ) ಕೃಷ್ಣಾ ನೀರಾವರಿ ಪ್ರದೇಶದಲ್ಲಿ ಎಷ್ಟು ಎಕರೆ ಕಪ್ಪು ಮಣ್ಣಿನ ಪ್ರದೇಶ ಇದೆ;

ಆ) ಅದರಲ್ಲಿ, ಎಷ್ಟು ಎಕರೆ ಪ್ರದೇಶ ಸವುಳು-ಜವುಳಾಗಿದೆ; ಇದನ್ನು ತಡೆಯಲು ಸರ್ಕಾರದ ಕಾರ್ಯಕ್ರಮವೇನು;

ಇ) ನೀರಿನ ಬಳಕೆ ಮತ್ತು ಬೆಳೆ ಪದ್ಧತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಬಿ. ಪಾಟೀಲ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಒಟ್ಟು 15,96,493 ಹೆಕ್ಟೇರ್ ಕಪ್ಪು ಮಣ್ಣಿನ ಪ್ರದೇಶ ಇದೆ.

ಆ) ಅದರಲ್ಲಿ 2,39,909 ಹೆಕ್ಟೇರ್ ಪ್ರದೇಶ ಸವುಳು-ಜವುಳು ಭಾದಿತವಾಗಿದೆ.

ಜಮೀನು ಸವುಳು-ಜವುಳಾಗುವುದನ್ನು ತಡೆಗಟ್ಟಲು ನೀರಾವರಿಯಿಂದ ಉಂಟಾಗುವ ಬಸಿನೀರನ್ನು ಹೊರಹಾಕಲು ಬಸಿಗಾಲುವೆಗಳನ್ನು ನಿರ್ಮಿಸಲಾಗುತ್ತಿದೆ.

ಸವುಳು-ಜವುಳು ಭಾದಿತ ಪ್ರದೇಶವನ್ನು ಸುಧಾರಣೆ ಮಾಡಲು ಕೇಂದ್ರ ಪುರಸ್ಕೃತ ಕಾರ್ಯಕ್ರಮವಾದ ಸವುಳು-ಜವುಳು ಭೂ ಸುಧಾರಣಾ

ಚಟುವಟಿಕೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಇಲ್ಲಿಯವರೆಗೆ 2,39,909 ಹೆಕ್ಟೇರ್ ಭಾದಿತ ಪ್ರದೇಶದಲ್ಲಿ 58,878 ಹೆಕ್ಟೇರ್ ಪ್ರದೇಶದವನ್ನು ಸುಧಾರಣೆ ಮಾಡಲಾಗಿದೆ.

ಇ) ಅಚ್ಚುಕಟ್ಟು ವ್ಯಾಪ್ತಿಯ ರೈತರಿಗೆ ವಾಲ್ಮಿ ಹಾಗೂ ಕಾಡಾಗಳ ಮೂಲಕ ತರಬೇತಿ ಕಾರ್ಯಗಾರಗಳನ್ನು ಹಮ್ಮಿಕೊಂಡು ಅವಶ್ಯವಾದ ನೀರಿನ ಸಮರ್ಥ ಬಳಕೆ, ಮಣ್ಣಿನ ಆರೋಗ್ಯ ಹೆಚ್ಚಿಸುವ ಕಾರ್ಯಕ್ರಮದ ಬಗ್ಗೆ, ಸವುಳು-ಜವುಳು ಮಣ್ಣಿನ ನಿರ್ವಹಣೆ ಬಗ್ಗೆ ಇತ್ಯಾದಿ ವಿಷಯಗಳ ಕುರಿತಂತೆ ನುರಿತ ತಜ್ಞರಿಂದ ತರಬೇತಿಯನ್ನು ನೀಡಲಾಗುತ್ತಿದೆ. ಇದಲ್ಲದೆ ಕೇಂದ್ರ ಪುರಸ್ಕೃತ ಚಟುವಟಿಕೆಯಾದ ಬೆಳೆ ಪ್ರಾತ್ಯಕ್ಷತೆಯಡಿ ಬೆಳೆ ಪದ್ಧತಿ ಬಗ್ಗೆ ರೈತರಿಗೆ ತಿಳುವಳಿಕೆ ನೀಡಲಾಗುತ್ತಿದೆ.

ಕಾಟನ್ ಮಿಲ್‌ಗಳು

409(171); ಶ್ರೀ ಪುಟ್ಟಣ್ಣಯ್ಯ ಕೆ.ಎಸ್. (ಮೇಲುಕೋಟೆ)

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಕಾಟನ್ ಮಿಲ್‌ಗಳು ಇವೆ; ಇವುಗಳಲ್ಲಿ ಎಷ್ಟು ಮಿಲ್‌ಗಳು ಚಾಲನೆಯಲ್ಲಿವೆ; ನಿಂತು ಹೋಗಿರುವ ಮಿಲ್ಲುಗಳ ಸಂಖ್ಯೆ ಎಷ್ಟು; ಮುಚ್ಚಿರುವ ಜವಳಿ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ನಿಲುವೇನು;

ಆ) ರಾಜ್ಯದಲ್ಲಿ ಎಷ್ಟು ಪವರ್‌ಲೂಮ್ ಮತ್ತು ಹ್ಯಾಂಡ್ ಲೂಮ್‌ಗಳಿವೆ; ಇವೆರಡನ್ನು ಬೆಳೆಸಲು ಸರ್ಕಾರದ ನಿಲುವೇನು (ವಿವರ ನೀಡುವುದು)?

ಶ್ರೀ ಬಾಬುರಾವ್ ಚಿಂಚನಸೂರ (ಜವಳಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 164 ಕಾಟನ್ ಮಿಲ್‌ಗಳು (ಸ್ಪಿನ್ನಿಂಗ್, ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್) ಇರುತ್ತದೆ. ಇದರಲ್ಲಿ ಒಟ್ಟು 146 ಮಿಲ್‌ಗಳು ಕಾರ್ಯನಿರತವಾಗಿರುತ್ತವೆ ಹಾಗೂ 18 ಮಿಲ್ಲುಗಳು ಕಾರ್ಯಸ್ಥಗಿತಗೊಂಡಿರುತ್ತವೆ.